ನಾಯಕರುಗಳು ವಿಪರೀತ ಗಾಳಿ ಬಂತ್ತು ಮಳೆಗೆ ಸಿಲುಕಿ ದೋಣಿ ಅಡಿ ಮೇಲಾಗಿ ಬಿದ್ದು ಮೃತಪಟ್ಟಿರ ತ್ತಾರೆ. ಅದುದರಿಂದ ಮೇಲ್ಕಾಣಿಸಿದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರವನ್ನು ಕೋ ಈಗಾಗಲೇ ನಾನು ಸರಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತೇನೆ. ಮೃತರ ಕುಟುಂಬಕ್ಕೆ ತುರ್ತಾಗಿ ಪರಿಹಾರವನ್ನು ಒದಗಿಸುವರೇ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—ಜಿಲ್ಲಾಧಿಕಾರಿಯವರಿಂದ ಕೂಡ ರಿಪೋರ್ಟ್ ಬಂದಿದೆ. ಪ್ರತಿಯೊಬ್ಬರಿಗೂ ಎರಡು ಸಾವಿರ ರೂಪಾಯಿಗಳನ್ನು ಮುಖ್ಯ ಮಂತ್ರಿಯವರ ಫಂಡ್‌ನಿಂದ ಕೊಡಲಾಗುವುದು.

VII ದಾವಣಗೆರೆಯಲ್ಲಿರತಕ್ಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಕ್ಕೆ ಮಾನ್ಯತೆಯನ್ನು ನೀಡುವ ಬಗ್ಗೆ.

ಶ್ರೀ ಪಂಪಾಪತಿ (ದಾವಣಗೆರೆ).—೧೯೬೯ನೇ ಇಸವಿಯಿಂದ ದಾವಣಗೆರೆಯಲ್ಲಿ ವಿಶ್ವವಿದ್ಯಾಲ ಯದ ಸ್ನಾತಕೋತ್ತರ ಕೇಂದ್ರ ನಡೆಯುತ್ತಿದೆ. ಇದಕ್ಕಾಗಿ ದಾನಿಗಳು ನೂರು ಎಕರೆ ಜಮೀನನ್ನು ದಾವಣಗೆರೆಗೆ ೫ ಕಿ.ಮೀ. ದೂರದಲ್ಲಿರುವ ತೋಳಹುಣಸೆಗ್ರಾಮದಲ್ಲಿ ಕೊಟ್ಟಿರುತ್ತಾರೆ. ಇದಲ್ಲದೆ ರಾಜನಹಳ್ಳಿ ಮನೆತನದ ಶ್ರೀ ಲಕ್ಷ್ಮಣಶೆಟ್ಟಿರು ಟ್ರಸ್ಟ್‌ನವರು ಅವರೂ ಕೂಡ ೨೪ ಎಕರೆ ಜಮೀನನ್ನು ಕೊಟ್ಟಿರುತ್ತಾರೆ. ಒಂದು ವರ್ಷದ ಹಿಂದೆ ರಾಷ್ಟ್ರಪತಿಯವರು ಈ ಕ್ಯಾಂಪಸ್ ಕಟ್ಟಡದ ಶಂಕು ಸ್ಥಾಪನೆಯನ್ನು ಮಾಡಿದರು. ಮಾನ್ಯ ಸಚಿವರಾದ ಶ್ರೀ ರಘುಪತಿಯವರು ಇದಕ್ಕೆ ಸರ್ಕಾರ ಮಾನ್ಯತೆ ಕೊಡುವ ತೀವ್ರ ಆಲೋಚನೆಯಲ್ಲಿ ಇದೆ ಎಂದು ಹೇಳಿದ್ದಾರೆ. ತೇವಣಿಯಾಗಿ ಈಗಾಗಲೇ ಐದು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ.

ಹೀಗಿದ್ದರೂ ಸಹ ಈ ಕೇಂದ್ರವನ್ನು ವಿಶ್ವವಿದ್ಯಾಲಯದವರು ಸರ್ಕಾರದ ಮಾನ್ಯತೆ ಇಲ್ಲವೆಂಬ ಕಾರಣದಿಂದ ರದ್ದುಮಾಡುವುದಾಗಿ ತಿಳಿದುಬಂದಿದೆ. ಇದು ದಾವಣಗೆರೆ ಮತ್ತು ಚಿತ್ರದುರ್ಗದ ಜನತೆಗೆ ಮಾಡುತ್ತಿರುವ ಅನ್ಯಾಯವಾಗಿದೆ. ಸರ್ಕಾರ ಈಗಾಗಲೇ ಸ್ನಾತಕೋತ್ತರ ಕೇಂದ್ರಕ್ಕೆ ಏಕ ಇನ್ನೂ ಮಾನ್ಯತೆ ಕೊಟ್ಟಿಲ್ಲವೆಂದು ಅರ್ಥವಾಗುತ್ತಿಲ್ಲ. ಇದರ ಹಿಂದೆ ರಾಜಕೀಯ ಇದೆಯೇ ಎಂದೂ ಅರ್ಥವಾಗುತ್ತಿಲ್ಲ. ಮಾನ್ಯತೆ ಕೊಟ್ಟು ಸರ್ಕಾರ ಈ ಸ್ನಾತಕೋತ್ತರ ಕೇಂದ್ರವನ್ನು ಉಳಿಸಬೇಕಾಗಿದೆ. ಇದನ್ನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಮಾನ್ಯ ಸದಸ್ಯರ ಪ್ರಶ್ನೆಯಲ್ಲೇ ಉತ್ತರ ಅಡಗಿದೆ ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇಲ್ಲವೆಂದು ಹೇಳಿಲ್ಲ. ಇದಕ್ಕೆ ವಿಶ್ವವಿದ್ಯಾನಿಲಯದ ಆಯೋಗದವರು ಕೆಲವು ನಿಬಂಧನೆಗಳನ್ನು ವಿಧಿಸಿದ್ದಾರೆ, ಈ ನಿಬಂಧನೆಗಳನ್ನು ಪೂರೈಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಆದ್ದರಿಂದ ಇದು ಸ್ಥಳಾಂತರ ಮಾಡದಂತಾಗಿ ಏನೇನು ಪ್ರಯತ್ನ ಮಾಡಬೇಕೋ ಅವನ್ನು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ.

VIII ಭಾರತೀಯ ಕಲಾಮಂದಿರದಲ್ಲಿರುವ ಅಂಧ ವಿದ್ಯಾರ್ಥಿಗಳಿಗೆ ವ್ಯಾಸಂಗ ಭತ್ಯೆಯನ್ನು ಕೊಡದಿರುವುದು.

ಶ್ರೀ ಪಟಮಕ್ಕಿ ರತ್ನಾಕರ (ತೀರ್ಥಹಳ್ಳಿ) —ಭಾರತೀಯ ಕಲಾಮಂದಿರದಲ್ಲಿ ವ್ಯಾಸಂಗ ಮಾಡು ತ್ತಿರುವ ಅಂಧ ವಿದ್ಯಾರ್ಥಿಗಳಿಗೆ ೧೯೮೪-೮೫ನೇ ಸಾಲಿನ ವ್ಯಾಸಂಗ ಭತ್ಯೆ ಮಂಜೂರುಗಿದ್ದು ರುಜು ವಾತು ಪಡಿಸಲು ವಿದ್ಯಾರ್ಥಿಗಳು ಹೋದನಂತರ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು, ಮೈಸೂರು ಇವರು ಮಂಜೂರು ಹಣವನ್ನು ಪೋತ ಮಾಡಿದ್ದರು. ವಿಚಾರಿಸಿಗಾಗ ಆಯವ್ಯಯ ಇರುವುದಿಲ್ಲ, ಮೇ ತಿಂಗಳಲ್ಲಿ ಖಂಡಿತ ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದರು. ಮೇ ತಿಂಗಳಿನಲ್ಲಿ ಮತ್ತೆ ವಿಚಾರಿಸಿದಾಗ ಇದೇ ನಿರ್ದೇಶಕರು ಪೋಲೀಸರನ್ನು ಕರೆಸಿ ವಿದ್ಯಾರ್ಥಿಗಳನ್ನು ಹೊರತಳ್ಳಿದರು. ಭಾರತೀಯ ಕಲಾಮಂದಿರ, ರಾಮಾನುಜ ರಸ್ತೆ ಮೈಸೂರು ಇಲ್ಲಿಗೆ ಹೋಗಿ ದಿನಾಂಕ ೧೯-೭-೮೫ರಂದು ಸುಮಾರು ೧೦ ಗಂಟೆ ರಾತ್ರಿ ಸಮಯದಲ್ಲಿ ದಬ್ಬಾಳಿಕೆ ನಡೆಸಿ ಬಲವಂತ ವಾಗಿ ಎಲ್ಲಾ ದಾಖಲಾತಿಗಳನ್ನೂ ನಿರ್ದೇಶಕರು ವಶಪಡಿಸಿಕೊಂಡು ಹೋಗಿರುತ್ತಾರೆ. ಮತ್ತೆ

ನಿಲಯದಲ್ಲಿರುವವರಿಗೆ ವ್ಯಾಸಂಗ ವೇತನ ಕೊಡಲಾಗುವುದಿಲ್ಲ, ಇದುವರೆಗೆ ತೆಗೆದುಕೊಂಡ ವೇತನ ಮರುಪಾವತಿ ಮಾಡಬೇಕು, ತಪ್ಪಿದಲ್ಲಿ ಸೆರೆವಾಸ ಅನುಭವಿಸಬೇಕಾಗುತ್ತದೆಂದು ತಿಳಿಸಿ ಬೆದರಿಕೆ ಹಾಕಿರುತ್ತಾರೆ ದಿನಾಂಕ ೨೩-೭-೮೫ರಂದು ಸುಮಾರು ೨೫-೩೦ ಅಂಧ ವಿದ್ಯಾರ್ಥಿಗಳು ನಿರ್ದೇಶಕರನ್ನು ವಿಚಾರಿಸಿದಾಗ ತೆಗೆದುಕೊಂಡ ಹಣ ಕೊಡಲಾಗುವುದಿಲ್ಲವೆಂದು ಹೊಸ ಶಾಸನ ಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಅಂಧ ವಿದ್ಯಾರ್ಥಿಗಳ ಸಹಾಯಕ್ಕೆ ಇದ್ದ ಬೆತ್ತಗಳನ್ನು ಅವರಿಂದ ಕಿತ್ತುಕೊಂಡು ಅವರನ್ನು ಹೊರಗೆ ಹಾಕಿರುತ್ತಾರೆ. ಅಂಧ ವಿದ್ಯಾರ್ಥಿಗಳಿಗೆ ಕೊಡಬೇಕಾದ ಮೊದಲ ಪ್ರಾಧಾನ್ಯತೆಯನ್ನು ಬಿಟ್ಟು ಕಣ್ಣು ಕಾಣುವವರಿಗೆ ಅಂಧರ ಶಾಲೆಗೆ ಕೆಲಸಕ್ಕೆ ತೆಗೆದುಕೊಂಡು ಹತ್ತು ತಿಂಗಳು ಬ್ರೈಲ್ ಶಿಕ್ಷಣಕ್ಕೆ ಮದ್ರಾಸಿಗೆ ಕಳುಹಿಸಲಿದ್ದಾರೆ. ಅಂಧ ವಿದ್ಯಾರ್ಥಿಗಳು ವಿಚಾರಿಸಿದರೆ ಅವರಿಗೆ ಸಾಧ್ಯವಿಲ್ಲ ಎಂದು ಹೇಳಿ ಕೇಂದ್ರ ಸರ್ಕಾರದ ತರಬೇತಿ ಪಡೆಯಿರಿ ಎಂದು ತಿಳಿಸಿರುತ್ತಾರೆ. ಆದ್ದರಿಂದ ಅಂಧ ವಿದ್ಯಾರ್ಥಿಗಳು ನ್ಯಾಯ ದೊರಕಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ಆದ್ದರಿಂದ, ಮಾನ್ಯ ಅಧ್ಯಕ್ಷರೇ, ಈ ಸರ್ಕಾರಿ ಅಧಿಕಾರಿ ಅಂಧ ವಿದ್ಯಾರ್ಥಿಗಳ ಬಗ್ಗೆ ಅಮಾನವೀಯತೆಯಿಂದ ನಡೆದುಕೊಂಡಿರುವುದರಿಂದ, ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಇಂತಹ ಅಧಿಕಾರಿಯನ್ನು ಸೂಕ್ತವಾಗಿ ವಿಚಾರಿಸಿ ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಸದಸ್ಯರು ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ತಪ್ಪಿತಸ್ಥರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ.—ಪರಿಶೀಲನೆ ಮಾಡುತ್ತೇವೆ. ಎಂದು ಪ್ರತಿಯೊಂದು ಪ್ರಶ್ನೆಗೂ ಹೀಗೆ ಉತ್ತರ ಕೊಟ್ಟರೆ ಹೇಗೆ ?

ಅಧ್ಯಕ್ಷರು.—ನಿಯಮ ೩೫ರಲ್ಲಿ ಚರ್ಚೆಗೆ ಅವಕಾಶ ಇಲ್ಲ. ಪರಿಶೀಲನೆ ಮಾಡಿ ಕ್ರಮ ತೆಗೆದು ಕೊಳ್ಳುತ್ತೇನೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

(ix) ಹುಬ್ಬಳ್ಳಿ-ಧಾರವಾಡದ ಹತ್ತಿರ ಟೆಲ್ಕೋನವರು ಕೈಗಾರಿಕೆ ಕೇಂದ್ರದ ಕೈಗಾರಿಕಾ ರಾಜ್ಯ ಮಂತ್ರಿಯವರ ಅನುಮತಿ ನಿರಾಕರಣೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) —ಅಧ್ಯಕ್ಷರೇ, ಈ ದಿನದ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಮತ್ತೊಂದು ಅಪಪ್ರಾತಕರ ಸುದ್ದಿ ಕರ್ನಾಟಕದ ಜನತೆಯನ್ನು ಕಂಗೆಡಿಸುವಂತಾದ್ದು. ಧಾರವಾಡ-ಹುಬ್ಬಳ್ಳಿ ಜನತೆಗಂತೂ ಇದರಿಂದ ತೀವ್ರ ನಿರಾಶೆಯಾಗುವಂತಾದ್ದು ಬಂದಿದೆ. ನಿನ್ನೆ ಕೇಂದ್ರದ ಕೈಗಾರಿಕಾ ರಾಜ್ಯ ಮಂತ್ರಿಯವರು ಟೆಲ್ಕೋನವರು ಧಾರವಾಡ-ಹುಬ್ಬಳ್ಳಿ ನಡುವೆ ಸ್ಥಾಪಿಸಬೇಕೆಂದಿದ್ದ, ಆ ಪ್ರದೇಶದಲ್ಲಿಯೇ ಅತ್ಯಂತ ಬೃಹತ್ ಉದ್ಯಮವಾಗಲಿದ್ದ, ನೇರವಾಗಿ ೮-೧೦ ಸಾವಿರ ಜನರಿಗೆ ಉದ್ಯೋಗ ನೀಡುವುದಲ್ಲದೆ ಅನೇಕ ಸಹಾಯಕ ಸಣ್ಣ ಕೈಗಾರಿಕೆಗಳ ಸಮುಚ್ಚಯವೊಂದು ಆರಂಭವಾಗಲು ಆಧಾರ ನೀಡಬಹುದಾಗಿದ್ದ, ೯,೦೦೦ ವಾಹನಗಳನ್ನು ನಿರ್ಮಿಸುವ ಕಾರ್ಖಾನೆಗೆ ಅನುಮತಿಯನ್ನು ನೀಡಲಾಗುವುದಿಲ್ಲವೆಂದು ಹೇಳಿದ್ದಾರೆ. ಇದು ನಿಜಕ್ಕೂ ದುರದೃಷ್ಟಕರವಾದದ್ದು. ವಿಜಯನಗರದ ಉಕ್ಕು ಕಾರ್ಖಾನೆ ಇತ್ಯಾದಿ ಕೇಂದ್ರ ಸರ್ಕಾರದ ಯೋಜನೆಗಳನ್ನು ಸ್ಥಾಪಿಸುವುದರಲ್ಲಿ ವಿಳಂಬವಿರಲಿ, ಖಾಸಗಿಯವರು ಸ್ಥಾಪಿಸುತ್ತೇವೆ ಎನ್ನುವ ಕೈಗಾರಿಕೆಗಳಿಗೂ ಅನುಮತಿ ನಿರಾಕರಿಸಿದರೆ ಕೇವಲ ಶೇಕಡಾ ೫ ಮಾತ್ರ ಇರುವ ಕರ್ನಾಟಕದ ಕೈಗಾರಿಕೆಗಳ ಸಂಖ್ಯೆ ಮತ್ತಷ್ಟು ಕುಸಿಯುತ್ತದೆ. ಈ ಬಗ್ಗೆ ಸರ್ಕಾರದ ಗಮನಪತ್ರವನ್ನು ಸೆಳೆಯುತ್ತಿದ್ದೇನೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲೇ ಇದ್ದಾರೆ. ತಾವು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಟೆಲ್ಕೋ ಫ್ಯಾಕ್ಟರಿ ಬಗ್ಗೆ ಈಗಾಗಲೇ ಪತ್ರಿಕೆಯಲ್ಲಿ ಪ್ರಸ್ತಾಪವಾಗಿದೆ. ಈ ಸದನದಲ್ಲೂ ಕೂಡ ಚರ್ಚೆ ಆಗಿದೆ. ಈ ಕಾರ್ಖಾನೆ ಧಾರವಾಡಕ್ಕೆ ಬರಬೇಕಾಗಿತ್ತು. ಆದರೆ ದುರ್ದೈವದಿಂದ ಕೇಂದ್ರಸರ್ಕಾರದವರು ಇದಕ್ಕೆ